ಸರ್ವೆ ನಂಬರ್	ವಿಸ್ತೀರ್ಣ (ಎಕರೆ)
೧೩೦	೧೧.೨೨
೧೬೮	೪.೨೧
೧೭೩	೧.೦೯
೪೨	೮.೧೦
೧೨೬	೭.೧೮
ಮಳಲಿ ನಂ. ೩೨೨	೫.೨೦
೩೩೭	೦.೧೫
೩೩೮	೬.೨೫
೩೩೯	೨.೦೭
೩೪೫	೩.೦೨
೩೮೨	೦.೧೨
	೫೧.೩೦

ಅ) ಇಲ್ಲ .

ಇ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಮಿನಿ ಸಿಮೆಂಟ್ ಫ್ಯಾಕ್ಟರಿಗೆ ಅನುಮತಿ ನೀಡುವುದು.

319(114)

ಶ್ರೀ ಶಿವಪ್ಪ ಬಿ.ಬಿ.(ಸಕಲೇಶಪುರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಮಿನಿ ಸಿಮೆಂಟ್ ಫ್ಯಾಕ್ಟರಿಗಳಿಗೆ ಯಾವಾಗ

ಪರವಾನಗಿ ನೀಡಲಾಗಿದೆ.

ಅ) ಈ ಫ್ಯಾಕ್ಟರಿಗಳಲ್ಲಿ ಎಷ್ಟು ಕಾರ್ಖಾನೆಗಳು ಸಿಮೆಂಟ್ ಉತ್ಪತ್ತಿ ಮಾಡುತ್ತಿವೆ.

ಇ) ಸಿಮೆಂಟ್ ಉತ್ಪತ್ತಿ ಮಾಡದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕೆ ಸಚಿವರು):

ಅ) 14 ಮಿನಿ ಸಿಮೆಂಟ್ ಘಟಕಗಳಿಗೆ 1980 1983ರ ಅವಧಿಯಲ್ಲಿ ಲೈಸನ್ಸ್ ನೀಡಲಾಗಿದೆ.

ಆ) ಯಾವ ಘಟಕವು ಉತ್ಪಾದನೆ ಮಾಡುತ್ತಿಲ್ಲ.

ಇ) ತಾಂತ್ರಿಕ ದೋಷದಿಂದ.

ತುಮಕೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಕಲುಷಿತ ನೀರು.

320(564)

ಶ್ರೀ ಶಿವಣ್ಣ (ತುಮಕೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಕಲುಷಿತ ನೀರು ಸರಬರಾಜಿನಿಂದ ವಿದ್ಯಾರ್ಥಿನಿಯರು ವಾಂತಿ ಭೇದಿಯಿಂದ ಅಸ್ವಸ್ಥರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಪರಿಶೀಲಿಸಲಾಗಿದೆಯೇ? ಮತ್ತು ಇದಕ್ಕೆ ಕಾರಣವೇನು?

ಇ) ನಿರ್ಲಕ್ಷ್ಯ ತೋರಿದ ನಿಲಯಪಾಲಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ?

ಈ) ಎಷ್ಟು ಜನ ವಿದ್ಯಾರ್ಥಿನಿಯರು ಈ ತೊಂದರೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು, ವಿವರಣೆ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.